# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದಕ್ಷಿಣ ವಲಯ ಕಲಬುರಗಿ

ಸಂಖ್ಯೆ:ಅ3/ಖಾ.ಪ್ರಾ.ಶಾ./ಮಾನ್ಯತೆ.ನವೀ/2018–19 ದಿನಾಂಕ: 09/11/2018

## ಜ್ಞಾಪನಾ

**ವಿಷಯ:** ರಾಜ್ ನವಲ್ ಟ್ರಸ್ಟ್ (ರಿ) ಕಲಬುರಗಿ ರವರ ಅನುದಾನ ರಹಿತ ಎಸ್.ಆರ್.ಎನ್.ಮೇಹತಾ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಆಜಾದಪೂರ ಸೇಡಂ ರಸ್ತೆ ಕಲಬುರಗಿ ಈ ಶಾಲೆಗೆ ಮಾನ್ಯತೆ ನವೀಕರಣ ನೀಡುವ ಕುರಿತು.

**ಉಲ್ಲೇಖ:**– 1) ಅಧಿಕಾರಿಗಳ/ಶಿಕ್ಷಣ ಸಂಯೋಜಕರ ವರದಿ ದಿನಾಂಕ: 09–11–2018

**ಆದೇಶ:–**

ಉಲ್ಲೇಖ–1 ರನ್ವಯ ಆಡಳಿತ ಮಂಡಳಿ ಸಲ್ಲಿಸಿದ ಪ್ರಸ್ತಾವನೆ ಹಾಗೂ ಸಂದರ್ಶನ ವರದಿಯಲ್ಲಿಯ ಶಿಫಾರಸ್ಸಿನ ಮೇರೆಗೆ ಶಿಕ್ಷಣ ಕಾಯ್ದೆ ಪಾಲಿಸುವ ಹಾಗೂ ಈ ಕೆಳಗೆ ನಮೂದಿಸಿದ ಷರತ್ತುಗಳನ್ನು ಪಾಲಿಸುವ ಕರಾರಿನ ಮೇರೆಗೆ ಎಸ್.ಆರ್.ಎನ್.ಮೇಹತಾ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಆಜಾದಪೂರ ಸೇಡಂ ರಸ್ತೆ ಕಲಬುರಗಿ ಶಾಲೆಗೆ ಹೆಸರಿನ ಮುಂದೆ ತೋರಿಸಿದ ಅವಧಿಗೆ ಮಾನ್ಯತೆ ನವೀಕರಣ ಷರತ್ತುಗಳಿಗೆ ಒಳಪಟ್ಟು ಆದೇಶಿಸಿದೆ. (ನಿಮ್ಮ ಶಾಲೆಯ ಮೂಲ ಭೂತ ಸೌಕರ್ಯಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲು ಸೂಚಿಸಲಾಗಿದೆ)

| ಕ್ರ.ಸಂ | ಶಾಲೆಯ ಹೆಸರು | ತರಗತಿ | ಮಾನ್ಯತೆ ವರ್ಷ |
|---|---|---|---|
| 01 | ಎಸ್.ಆರ್.ಎನ್.ಮೇಹತಾ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಆಜಾದಪೂರ ಸೇಡಂ ರಸ್ತೆ ಕಲಬುರಗಿ | 6 ರಿಂದ 8ನೇ ತರಗತಿ **(ಆಂಗ್ಲ ಮಾಧ್ಯಮ)** ಅನುದಾನ ರಹಿತ | 2017–18 ರಿಂದ 2021–22 ನೇ ಸಾಲಿನ ವರೆಗೆ ಮಾನ್ಯತೆ ನವೀಕರಣ ನೀಡಲಾಗಿದೆ. |

**ಷರತ್ತುಗಳು:–**

1) ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯು ಎಲ್ಲಾ ಜಿಲ್ಲಾ ನೊಂದಾಣಾಧಿಕಾರಿಗಳಿಂದ ಪ್ರತಿ ವರ್ಷ ನವೀಕರಿಸಿಕೊಳ್ಳತಕ್ಕದ್ದು.
2) ಶಾಲೆಯಲ್ಲಿ ಎಲ್ಲಾ ಜಾತಿ ಮಕ್ಕಳಿಗೆ ಸೇರ್ಪಡೆಯಾಗಲು ಮುಕ್ತ ಅವಕಾಶ ನೀಡತಕ್ಕದ್ದು.
3) ಇಲಾಖೆಯ ಪೂರ್ವಾನುಮತಿ ಇಲ್ಲದೆ ಯಾವುದೇ ತರಗತಿಗಳನ್ನು ತೆರೆಯತಕ್ಕದಲ್ಲ
4) ಶಾಲೆಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷ ಅನುಮೋದನೆಗೊಂಡ ಚಾರ್ಟಡ್ ಅಕೌಂಟೆಟ ರವರಿಂದ ಅಡಿಟ್ ಮಾಡಿಸತಕ್ಕದ್ದು.
5) ಶಿಕ್ಷಣ ಕಾಯ್ದೆಯನ್ವಯ ಪ್ರತಿ ತರಗತಿಗಳಲ್ಲಿ ಮಕ್ಕಳ ಸಂಖ್ಯೆ 50:40:1 ಅನುಪಾತ ಹೊಂದಿರತಕ್ಕದ್ದು.
6) ನಿಗಧಿ ಪಡಿಸಿದ ಸ್ಥಿರ ನಿಧಿ ಜಂಟಿ ಖಾತೆಯಲ್ಲಿ ಠೇವಣಿಕರಿಸತಕ್ಕದ್ದು
7) ಕರ್ನಾಟಕ ಶಿಕ್ಷಣ ಮಸೂದೆಯಡಿ ರಚಿತವಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ನಿಯಂತ್ರಣ ಮತ್ತು ಪಠ್ಯಕ್ರಮ ನಿಗಧೀಕರಣ ನಿಯಾಮಾವಳಿ 1995 ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಯ ಮಾನ್ಯತೆ ನಿಯಮಗಳು 1999 ರ) ಅಡಿಯಲ್ಲಿ ನಿಗದಿಪಡಿಸಿದಂತೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಹೊಂದಿರತಕ್ಕದ್ದು.
8) ಆಡಳಿತ ಮಂಡಳಿಯವರು ಇಲಾಖೆಯ ಎಲ್ಲಾ ನೀತಿನಿಯಮಗಳಿಗೆ ಬದ್ಧರಾಗಿರತಕ್ಕದ್ದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ದಕ್ಷಿಣ ವಲಯ ಕಲಬುರಗಿ

ಗೆ,

ಅಧ್ಯಕ್ಷರು / ಕಾರ್ಯದರ್ಶಿಗಳು, ರಾಜ್ ನವಲ್ ಟ್ರಸ್ಟ್ (ರಿ) ಕಲಬುರಗಿ